ನಡುವೆ ನಡೆಯುತ್ತಿದ್ದ ಸಂಭಾಷಣೆ ಹಾಗೂ ದೃಶ್ಯವನ್ನು ಆ ಮರದ ಮೇಲೆ ಕುಳಿತ ಮಂಗಣ್ಣ ನೋಡುತ ಮನದಲ್ಲಿ ಈ ಪಾಕಡಾ ನರಿ ಪಾಪದ ಮೊಲಗಳನ್ನು ತಿಂದು ಮುಗಿಸಿಬಿಡುತ್ತದೆ. ತಾನು ಹೇಗಾದರೂ ಮಾಡಿ ಈ ಮೊಲಗಳ ಜೀವ ಉಳಿಸಬೇಕು ಎಂದುಕೊಂಡು ಏನೊಂದು ಮಾತನಾಡದೇ ಸುಮ್ಮನೆ ನೋಡುತ್ತ ಕುಳಿತಿತ್ತು. ಅದು ಕುಳಿತಿದ್ದು ನರಿಗಾಗಲಿ ಮೊಲಕ್ಕಾಗಲಿ ಗೊತ್ತಿರಲಿಲ್ಲ. ಕೆಲ ನಿಮಿಷಗಳ ನಂತರ ಒಂದು ಪುಟ್ಟ ಡ್ರಮ್ ತಳ್ಳಿಕೊಂಡು ಬಂದ ನರಿ ಆ ಮೊಲದ ನಾಯಕನಿಗೆ ಒಬ್ಬೊಬ್ಬರನ್ನೇ ಇಲ್ಲಿ ಕಳುಹಿಸು. ಅದನ್ನು ಬಿಟ್ಟು ಬಂದು ಮತ್ತೆ ಇನ್ನೊಂದನ್ನು ಕರೆದೊಯ್ಯುವೆ ಎಂದಿತು.

ಅದರ ಮಾತು ನಂಬಿದ ಮೊಲದ ನಾಯಕ ತನ್ನ ಗುಂಪಿನ ಒಂದು ಮೊಲವನ್ನು ಕಳುಹಿಸಿತು. ನರಿಯ ಬಳಿ ಆ ಮೊಲ ಬರುತ್ತಿದ್ದಂತೆ ಆ ಮೊಲದೊಂದಿಗೆ ಪ್ರೀತಿಯಿಂದ ಮಾತನಾಡುತ್ತ ಅದನ್ನು ಡ್ರಮ್‌ನೊಳಗೆ ಕೂರಿಸಿ ಒಳ ಒಳಗೇ ತನ್ನ ಯೋಜನೆ ಫಲಿಸಿತು ಎಂದು ಖುಷಿ ಪಡತೊಡಗಿತು. ಈ ಅವಧಿಯಲ್ಲಿ ಮರದ ಮೇಲಿದ್ದ ಮಂಗಣ್ಣ ಟೊಂಗೆಯಿಂದ ಟೊಂಗೆಗೆ ಹಾರಿ ನರಿ ಇದ್ದ ಜಾಗದಲ್ಲಿನ ಮರಕ್ಕೆ ಬಂದು ಕುಳಿತಿತು. ಮೊಲವನ್ನು ಡ್ರಮ್ ಒಳಗೆ ಕೂರಿಸಿದ ನರಿ ಇನ್ನೇನು ಅದನ್ನು ತಳ್ಳಿಕೊಂಡು ಹೋಗಬೇಕು ಎನ್ನುವಷ್ಟರಲ್ಲಿ ಮರದ ಮೇಲೆ ಕುಳಿತ ಮಂಗಣ್ಣ ಸ್ವಲ್ಪ ದೂರದಲ್ಲಿ ಆ ಮರದ ಕಾಯಿ ಕಿತ್ತು ಒಣಗಿದ ಎಲೆ ಮೇಲೆ ಎಸೆಯಿತು. ಆಗ ಇದೇನು ಇದ್ದಕ್ಕಿದ್ದಂತೆ ಶಬ್ದ ಬಂತಲ್ಲ. ನೋಡಿ ಬರೋಣ ಎಂದು ನರಿ ಶಬ್ದ ಬಂದ ಕಡೆ ಹೋಗಿ ಹುಡುಕತೊಡಗಿತು. ಇದೇ ಅವಕಾಶ ಕಾಯುತ್ತಿದ್ದ ಮಂಗಣ್ಣ ಮರದಿಂದ ಸರಸರನೇ ಇಳಿದು ಡ್ರಮಿನೊಳಗಿದ್ದ ಮೊಲವನ್ನು ಹಿಡಿದುಕೊಂಡು ಮತ್ತೆ ಮರ ಏರಿ ಕುಳಿತಿತು. ಶಬ್ದ ಬಂದ ಕಡೆ ಹೋದ ನರಿಗೆ ಏನೂ ಕಾಣದಾದಾಗ ಅದು ತನ್ನಷ್ಟಕ್ಕೆ ತಾನು 'ಎಲ್ಲೋ ನನಗೆ ಭ್ರಮೆ' ಎಂದು ಆಸೆಯಿಂದ ಆ ಡ್ರಮ್ಮನ್ನು ಇಳಿಜಾರಿನಲ್ಲಿ ಇದ್ದ ಆ ಮರದ ಬಳಿ ನಿಲ್ಲಿಸಿ ಮೊಲ ತಿನ್ನಲು ನೋಡಿದಾಗ ಮೊಲ ಕಾಣಲಿಲ್ಲ.

'ಅರೇ... ಎಲ್ಲಿ ಹೋಯಿತು... ಎಲ್ಲಿ ಹೋಯಿತು' ಎಂದು ಯೋಚನೆ ಮಾಡುತ್ತಿದ್ದಾಗ ಅದೆಲ್ಲಿಂದಲೋ ಅಲ್ಲಿಗೆ ಬಂದ ಹುಲಿಯ ಬಾಯಿಗೆ ಅದು ಆಹಾರವಾಯಿತು. ಈ ದೃಶ್ಯ ಕಂಡ ಮಂಗಣ್ಣ ಕೈಯಲ್ಲಿ ಮೊಲ ಹಿಡಿದುಕೊಂಡು ಬಂದು ತೊರೆಯ ಬಳಿ ಇದ್ದ ಮೊಲದ ನಾಯಕನ ಕೈಗೆ ಕೊಟ್ಟು ನರಿ ಮಾಡಿದ ನಾಟಕ ಹಾಗೂ ಅದಕ್ಕೆ ತಕ್ಕ ಫಲ ಅನುಭವಿಸಿರುವ ವಿಚಾರ ಎಲ್ಲವನ್ನೂ ಹೇಳಿದಾಗ ಮೊಲದ ನಾಯಕ ಮಂಗಣ್ಣನಿಗೆ ಧನ್ಯವಾದ ಹೇಳುವ ಜೊತೆ ಠಕ್ಕ ನರಿಗೆ ತಕ್ಕ ಶಾಸ್ತಿ ಆಯಿತು ಎಂದೆನ್ನುತ್ತ ತನ್ನ ಪರಿವಾರದೊಂದಿಗೆ ಅಲ್ಲಿಂದ ಹೊರಟು ಹೋಯಿತು.

■





**ಅನುಷಾ ಬೋರಂಚಿ**
7ನೇ ತರಗತಿ, ವಿಶ್ವಧಾಮ ಆಂಗ್ಲಮಾಧ್ಯಮ ಶಾಲೆ, ಸೇಡಂ



**ವಿನೀತ್ ಎಂ.**
7ನೇ ತರಗತಿ, ಡೆಲ್ಲಿ ಪಬ್ಲಿಕ್ ಸ್ಕೂಲ್ ಮೈಸೂರು





**ಆರ್ನ ರಾಕೇಶ್**
2ನೇ ತರಗತಿ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು

